ವಿಷಯ :- ಸುರೇಂದ್ರನಾಥ್ ಸಮಿತಿಯ ವರದಿಯ ಅನುಷ್ಠಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 773 (1215)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪದವಿ ಪೂರ್ವ ಶಿಕ್ಷಣದ ಗುಣಮಟ್ಟ ಸುಧಾರಿಸಲು ಸುರೇಂದ್ರನಾಥ್ ಸಮಿತಿಯು ವರದಿ ಸರ್ಕಾರದವರಿಗೆ ಸಲ್ಲಿಸಿರುವದೇ?

ಆ) ಹಾಗಿದ್ದಲ್ಲಿ ಆ ವರದಿಯ ಮುಖ್ಯಾಂಶಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ :- (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ಹೌದು

ಆ) ಮುಖ್ಯಾಂಶಗಳು ಇಂತಿವೆ :-

1) 42 ಹಂತಕ್ಕೆ ವಿಶಿಷ್ಟ ಸ್ಥಾನಮಾನ.

2) ಪದವಿ ಪೂರ್ವ ಶಿಕ್ಷಣ ಹಂತಕ್ಕೆ ಒಂದು ಶೈಕ್ಷಣಿಕ ಪರಿಷತ್ತು ರಚನೆ.

3) ಪದವಿ ಪೂರ್ವ ಶಿಕ್ಷಣಕ್ಕೆ ವಿಭಾಗೀಯ ಸಹ ನಿರ್ದೇಶಕರ ಸೃಷ್ಟಿ ಮತ್ತು ವಿಭಾಗೀಯ ಸಹ ನಿರ್ದೇಶಕರಿಗೆ ಸಹಕರಿಸಲು ಉಪ ನಿರ್ದೇಶಕರ ಮಟ್ಟದ ವಿಷಯ ತಜ್ಞರ ಸೃಷ್ಟಿ.

4) ಶೈಕ್ಷಣಿಕ ಮೇಲ್ವಿಚಾರಣೆಯನ್ನು ಸಹ ನಿರ್ದೇಶಕರಿಗೆ ವಹಿಸುವುದು.

5) ಪರೀಕ್ಷಾ ಪದ್ಧತಿಯ ವಿಕೇಂದ್ರೀಕರಣ

6) ಪದವಿ ಪೂರ್ವ ಹಂತಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ನಿಯಮಾವಳಿಗಳ ರಚನೆ.

7) ಪದವಿ ಪೂರ್ವ ಶಿಕ್ಷಣವನ್ನು ಪ್ರೌಢ ಶಿಕ್ಷಣದಿಂದ ಬೇರ್ಪಡಿಸುವುದು.

ಸರ್ಕಾರವು ವರದಿಯನ್ನು ತಾತ್ವಿಕವಾಗಿ ಒಪ್ಪಿ ಕೆಲವು ಅಂಶಗಳನ್ನು ಜಾರಿಗೆ ತಂದಾಗಿದೆ.

ವಿಷಯ :- ರಾಜ್ಯದಲ್ಲಿ ಗ್ರಂಥಾಲಯಗಳಿಗೆ ಜನರೇಟರ್ಸ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 774 (1216)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಬೆಂಗಳೂರಿನಲ್ಲಿರುವ ಗ್ರಂಥಾಲಯಗಳೆಷ್ಟು?

ಇ) ಈ ಗ್ರಂಥಾಲಯಗಳ ಪೈಕಿ ಎಷ್ಟು ಗ್ರಂಥಾಲಯಗಳಿಗೆ ಜನರೇಟರ್ ಸೌಲಭ್ಯವನ್ನು ಒದಗಿಸಲಾಗಿದೆ.

ಈ) ಎಲ್ಲಾ ಗ್ರಂಥಾಲಯಗಳಿಗೆ ಜನರೇಟರ್ಸ್‌ಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :-

ಅ) 1934 (ಗ್ರಾಮೀಣ ಗ್ರಂಥಾಲಯಗಳು ಸೇರಿ)

ಆ) 68

ಇ) 41 ಗ್ರಂಥಾಲಯಗಳಲ್ಲಿ ಸೈಲೆಂಟ್ ಜನರೇಟರ್ಸ್ ಅಳವಡಿಸಿದೆ.

ಈ) ಹಣಕಾಸಿನ ಅನುಕೂಲತೆಗನುಗುಣವಾಗಿ ಹಂತಹಂತವಾಗಿ ಜನರೇಟರ್‌ಗಳನ್ನು ಅಳವಡಿಸಲಾಗುವುದು.

ವಿಷಯ :- ಖಾಸಗೀ ಕನ್ನಡ ನರ್ಸರಿ ಶಾಲೆಗಳ ಶಿಕ್ಷಕರಿಗೆ ಪೂರ್ತಿ ಸಂಬಳ ಇತರೇ ಸೌಲಭ್ಯ ನೀಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 775 (1219)

ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಕನ್ನಡ ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ;

ಇ) ಈ ಶಾಲೆಗಳ ಉಪಾಧ್ಯಾಯರುಗಳ ಸಂಬಳಕ್ಕೆ ಸರ್ಕಾರವು ನೀಡುತ್ತಿರುವ ಅನುದಾನದ ಪ್ರಮಾಣವೆಷ್ಟು;

ಈ) ಈ ಶಾಲೆಗಳಲ್ಲಿನ ಎಲ್ಲಾ ಉಪಾಧ್ಯಾಯರುಗಳಿಗೆ ಸರ್ಕಾರವು ಚಿಕ್ ಮೂಲಕ ಪೂರ್ತಿ ಸಂಬಳ ನೀಡಲು ಆಶ್ವಾಸನೆ ನೀಡಿರುವುದು ನಿಜವಲ್ಲವೇ;

ಉ) ಹಾಗಿದ್ದಲ್ಲಿ, ಈ ಶಾಲೆಗಳಲ್ಲಿನ ಉಪಾಧ್ಯಾಯರುಗಳಿಗೆ ಪೂರ್ತಿ ಸಂಬಳ, ಟೈಂಬೌಂಡ್ ಇಂಕ್ರಿಮೆಂಟ್, ಪಿಂಚಣಿ ಹಾಗೂ ಗಳಿಕೆ ರಜ ನಗದು ಹಣ ಪಾವತಿ ಮಾಡುವ ಸೌಲಭ್ಯಗಳನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?